## ಇಲ್ಲಿಯವರೆಗೆ



ಕಥೆ ಮತ್ತೆ ಆತ್ಮದತ್ತ ತಿರುಗುತ್ತದೆ. ಸತ್ತ ಮೇಲೆ ಎರಡು ಮೂರು ದಿನಗಳಲ್ಲಿ ಹೂಳದೇ ಇದ್ದರೆ ಉಗುರು ಮತ್ತು ಕೂದಲು ಬೆಲೆಯುತ್ತದೆಯಂತೆ. ಹೆಣವನ್ನು ಹೆಚ್ಚು ದಿನ ಇಟ್ಟುಕೊಳ್ಳುವವರು ಅದರ ಗಡ್ಡ, ಉಗುರುಗಳನ್ನು ಆಗಾಗ ಕತ್ತರಿಸಬೇಕಾಗುತ್ತದೆ. ಮನುಷ್ಯನ ಬದುಕಿನಲ್ಲಿ ಎರಡು ಬಗೆ ಇರುತ್ತದೆ ಒಂದು, ಮೂಲಭೂತ ಜೀವನ. ಎರಡು, ದೈಹಿಕ ಜೀವನ. ಪ್ರಾಣ ಎಂದು ಕರೆಯಲ್ಪಡುವ ದೈಹಿಕ ಜೀವನಶಕ್ತಿ ಐದು ಮೂಲಭೂತ ಅಭಿವ್ಯಕ್ತಿಗಳನ್ನು ಹೊಂದಿರುತ್ತದೆ. ಇವುಗಳನ್ನು ಸಮಾನ, ಪ್ರಾಣ, ಉದಾನ, ಅಪಾನ ಮತ್ತು ವ್ಯಾನ ಎಂದು ಕರೆಯಲಾಗುತ್ತದೆ. ಈ ಎಲ್ಲ ತಾತ್ವಿಕ ಅಂಶಗಳ ಬಳಿಕ ಮತ್ತೆ ಕೃಷ್ಣ ತನ್ನ ಕಥೆಯನ್ನು ಹೇಳಲಾರಂಭಿಸುತ್ತಾನೆ. ಈ ಮಧ್ಯೆ ಬೆಳೆದು ದೊಡ್ಡವರಾದ ತೇಜಸ್ ದಮಯಂತಿ ಸ್ವತಂತ್ರ ಹಕ್ಕಿಗಳಾಗುತ್ತಾರೆ. ತೇಜಸ್ ರಾಧಾ ಎಂಬ ಸಹಪಾಠೀ ಹುಡುಗಿಯ ಹಿಂದೆ ಓಡಾಡುತ್ತಾನೆ. ಮನೆಗೂ ಕರೆದುಕೊಂಡು ಬರುತ್ತಾನೆ. ಆಗ ಸಾವಿತ್ರಿ, ತೇಜಸ್‌ಗೆ 'ನೋಡು ತೇಜು. ನೀನಾಗಲಿ ದಮಯಂತಿಯಾಗಲಿ ಲವ್ವು ಗಿವ್ವು ಅಂತ ಏನೇನೊ ಮಾಡುವುದಕ್ಕೆ ಹೋಗ್ಬೇಡಿ. ಮೊದಲು ಡಿಗ್ರಿ ಮುಗಿಸಿ ಕೆಲಸಕ್ಕೆ ಸೇರಿಕೊಳ್ಳಿ' ಎನ್ನುತ್ತಾಳೆ. 'ಅಮ್ಮ ಸುಮ್ಮನೇ ಯಾಕೆ ತಲೆ ಕೆಡಿಸಿಕೊಳ್ತಿಯಾ? ಇದು ನಿಮ್ಮ ಕಾಲ ಅಲ್ಲ ಬಿಡಮ್ಮ' ಎನ್ನುತ್ತಾನೆ ತೇಜಸ್. ಆದಾಗಿ ಒಂದು ದಿನ ರಾತ್ರಿ ದಮಯಂತಿ ಸ್ಕೂಟರ್ ತೆಗೆದುಕೊಂಡು ಹೊರಗೆ ಸುತ್ತಾಡಲು ಹೋಗುತ್ತಾಳೆ. ಅಪರಾತ್ರಿಯಲ್ಲಿ ನಾಲ್ಕು ಮಂದಿ ಪುಂಡುಪೋಕರು ಆಕೆಯ ಮೇಲೆ ಅತ್ಯಾಚಾರ ಮಾಡುತ್ತಾರೆ. ದಮಯಂತಿ ಆಸ್ಪತ್ರೆ ಸೇರುತ್ತಾಳೆ. ಎಷ್ಟು ಹೊತ್ತಾದರೂ ಮನೆಗೆ ಬಾರದ ಮಗಳ ಬಗ್ಗೆ ಮನೆಯಲ್ಲಿ ಎಲ್ಲರಲ್ಲೂ ಆತಂಕ ಕಾಡುತ್ತದೆ. ಆಸ್ಪತ್ರೆಯ ಹೊರಗೆ ಟೀವಿ ಮಾಧ್ಯಮದವರು ನಡೆದ ಘಟನೆಯ ವಿವರ ಕೇಳುತ್ತಾರೆ.

ನ್ಯಾಯಾಲಯಕ್ಕೆ ಕರೆದಾಗೆಲ್ಲ ನಿಮ್ಮ ಮಗಳು ಪದೇ ಪದೇ ಹೋಗಬೇಕಾಗುತ್ತೆ. ನಿಮ್ಮ ಮಗಳ ಓದು ಮತ್ತು ಕೆಲಸಕ್ಕೆ ಅಡ್ಡಿಯಾಗಬಹುದು. ತಪ್ಪು ಮಾಡಿದವರು ಯಾರೂ ಅಂತ ಗೊತ್ತಿದ್ದರೆ ಹಿಡಿದು ಏನಾದರು ಮಾಡಬಹುದಿತ್ತು. ಅವರನ್ನು ಹಿಡಿಯಲೇಬೇಕು ಅಂದರೆ ಖಂಡಿತ ಹಿಡಿದುಬಿಡ್ತೀವಿ. ಅನಂತರ ಏನು? ಅದು ನ್ಯೂಸ್ ಚಾನೆಲ್‌ಗಳಲ್ಲಿ ದೊಡ್ಡ ಪ್ರಚಾರ ಆಗುತ್ತೆ. ಸಾರಿ ಸರ್. ನಿಜವಾಗಿ ಹೇಳಬೇಕಾದರೆ ಇದನ್ನೆಲ್ಲ ನಾನು ನಿಮ್ಮ ಹತ್ತಿರ ಮಾತನಾಡಬಾರದು. ನಿಮ್ಮದು ಒಳ್ಳೇ ಫ್ಯಾಮಿಲಿ. ನೀವು ಸಮಾಜದಲ್ಲಿ ಒಳ್ಳೆ ಹೆಸರು ಇರುವವರು ಅಂತ ನಿಮ್ಮ ಹತ್ತಿರ ಬಂದು ಹೇಳ್ತಾ ಇದ್ದೀನಿ. ನಾನು ನಿಮ್ಮ ಜೊತೆಗೆ ಮಾತನಾಡಿದ ವಿಷಯಾನ ಯಾರಿಗೂ ದಯವಿಟ್ಟು ಹೇಳುವುದಕ್ಕೆ ಹೋಗಬೇಡಿ. ಸ್ವಲ್ಪ ದಿನಗಳು ಆದ ಮೇಲೆ ಮತ್ತೆ ಮಾತಾಡೋಣ' ಎಂದ ಸಬ್ ಇನ್ಸ್‌ಪೆಕ್ಟರ್ ಹೊರಟುಹೋದರು.

***

ತುಂಬಾ ನೊಂದುಕೊಂಡಿದ್ದ ನಮ್ಮ ಕುಟುಂಬ ಮನೆಯ ಗೋಡೆಗಳ ಒಳಗೆ ಅವಿತುಕೊಂಡಿದ್ದಂತೆ ತೋರುತ್ತಿತ್ತು. ಗೋಡೆಗಳೂ ಕೂಡ ನಮ್ಮನ್ನ ಹಂಗಿಸುವಂತೆ, ನಮಗೆ ಆಶ್ರಯ ನೀಡಲು ಹೆದರಿಕೊಂಡಿರುವಂತೆ ಕಾಣಿಸುತ್ತಿದ್ದವು. ನಾವೆಲ್ಲರೂ ಮನೆಯ ಬಾಗಿಲು ಕಡೆಗೆ ಹೋಗುವುದೇ ಬೇಡ ಯಾರಾದರೂ ಬಾಗಿಲಲ್ಲಿ ಬಂದು ಕಾಣಿಸಿಕೊಳ್ಳುವುದೂ ಬೇಡ ಎಂಬಂತೆ ಯೋಚಿಸುತ್ತಿದ್ದೆವು. ಒಂದು ದಿನ ಬೆಳಿಗ್ಗೆ ಯಾರೋ ಮನೆ ಕಾಂಪೌಂಡ್ ಗೇಟ್ ತೆಗೆದುಕೊಂಡು ಬಾಗಿಲಿಗೆ ಬಂದು ಬೆಲ್ ಹೊಡೆದರು. ಮೊದಲೇ ಕುಪಿತನಾಗಿದ್ದ ನಾನೇ ಹೋಗಿ ಬಾಗಿಲು ತೆಗೆದೆ. ನಾಲ್ಕಾರು ಮಹಿಳೆಯರು ಎದುರಿಗೆ ನಿಂತುಕೊಂಡಿದ್ದರು. 'ಇದು ದಮಯಂತಿ ಅವರ ಮನೆ ತಾನೆ?' ಒಬ್ಬರು ಕೇಳಿ, ನಾನು 'ಹೌದು! ನೀವ್ಯಾರು' ಎಂದೆ. 'ನಾವು ಮಹಿಳಾ ಜಾಗೃತಿ ಸಂಘದವರು'

'ನೀವು?'

'ನಾನು, ದಮಯಂತಿ ತಂದೆ' ಎಂದೆ. 'ಓ ಪ್ರೊಫೆಸರ್ ಕೃಷ್ಣ ಅವರು. ನಾವು ದಮಯಂತಿಯ ಜೊತೆಗೆ ಸ್ವಲ್ಪ ಮಾತನಾಡಬೇಕಿದೆ. ತಾವು ಮನೆ ಒಳಗೆ ಬರುವುದಕ್ಕೆ ಅಪ್ಪಣೆ ಕೊಟ್ಟರೆ ಚೆನ್ನಾಗಿರುತ್ತೆ' ಎಂದಳು. 'ಮ್ಯಾಡಮ್, ನಾವು ಈಗಾಗಲೇ ತುಂಬಾ ನೊಂದಿದ್ದೀವಿ. ದಯವಿಟ್ಟು ನೀವು ಇಲ್ಲಿಂದ ಹೋಗಿ' ಎಂದೆ. `ಸರ್. ತಾವು ಪ್ರೊಫೆಸರ್ ಎಲ್ಲವೂ ತಿಳಿದಿರುವವರು. ಒಂದು ಹೆಣ್ಣು ಮಗಳಿಗೆ ಸಮಾಜದಲ್ಲಿ ಅನ್ಯಾಯ ಆಗಿದೆ ಅಂದರೆ ಆ ಹೆಣ್ಣು ಮಗಳಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ತಾವು ಮೊದಲು ಮುಂದೆ ನಿಲ್ಲಬೇಕು. ಇಲ್ಲ ಅಂದರೆ ನಮ್ಮಂತವರಿಗೆ ಸಹಾಯ ಮಾಡಬೇಕು' ಎಂದರು. ಸಾವಿತ್ರಿ ಬಂದು 'ಯಾರು ಇವರು?' ಎಂದು ಕೇಳಿದ್ದೆ ಆ ಮಹಿಳೆ, ಅದೇ ವಿಷಯವನ್ನು ಪುನರಾವರ್ತಿಸಿದರು. ಸಾವಿತ್ರಿ, `ರೀ ಮ್ಯಾಡಮ್ ದಯವಿಟ್ಟು ನೀವು ಇಲ್ಲಿಂದ ಹೋಗಿ' ಎಂದು ನನ್ನ ಕೈ ಹಿಡಿದು ಮನೆ ಒಳಕ್ಕೆ ಎಳೆದುಕೊಂಡು ಬಾಗಿಲು ಮುಚ್ಚಿ ಬಿಟ್ಟಳು.

'ಆ ಕಡೆ ಆ ನ್ಯೂಸ್ ಚಾನೆಲ್‌ನವರದು ಒಂದು ಕಾಟ ಆದರೆ, ಅವರು ಸಾಲದೂ ಅಂತ ಇವರು ಬೇರೆ ಬಂದಿದ್ದಾರೆ' ಸಾವಿತ್ರಿ ಕೋಪದಿಂದ ಹೇಳಿದಳು. ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ ದಮಯಂತಿ 'ಬಾಗಿಲಿಗೆ ಬಂದವರನ್ನು ಒಳಗಡೆ ಕರೆದು ಕೂರಿಸಿ ಏನು ಹೇಳ್ತಾರೊ ಕೇಳಬೇಕಾಗಿತ್ತು? ಅವರ ಮೇಲೆ ಯಾತಕ್ಕೆ ಕೋಪ ಮಾಡಿಕೊಳ್ಳಬೇಕು?' ಎಂದಳು. ಸಾವಿತ್ರಿ, ದಮಯಂತಿಯ ಮಾತುಗಳಿಗೆ ಕೋಪಗೊಂಡು ದುರುಗುಟ್ಟಿ ನೋಡಿದಳು. ನಾನು ಹೌದಲ್ಲ! ಮನೆ ಒಳಗೆ ಕರೆದು ಕೂರಿಸಿ ಮಾತನಾಡಿಸಿದ್ದರೆ ಏನಾಗ್ತಾ ಇತ್ತು? ಎಂದುಕೊಂಡೆ. ಮತ್ತೆ ಬಾಗಿಲು ತೆಗೆದು ಹಿಂದಕ್ಕೆ ಹೋಗುತ್ತಿದ್ದವರನ್ನು ಕರೆದೆ. ನಾಲ್ಕಾರು ಮಹಿಳೆಯರು ಮನೆ ಒಳಕ್ಕೆ ಬಂದು ಕುಳಿತುಕೊಂಡರು. ನಾನೆ `ಸಾರಿ ಮ್ಯಾಡಮ್', ನಮಗೆ ಏನು ಮಾಡಬೇಕು ಅಂತ ತೋಚ್ತಾ ಇಲ್ಲ' ಎಂದೆ. ಹಾಗೇ ಹೇಳಿದಾಗ ನಾನ್ಯಾಕೆ ಹೀಗೆಲ್ಲ ನಡೆದುಕೊಳ್ತಾ ಇದ್ದೀನಿ ಅನಿಸಿತು. ಸಾವಿತ್ರಿ ಈಗ ಕೋಪ ಮಾಡಿಕೊಂಡು ಕೋಣೆಯ ಒಳಕ್ಕೆ ಹೋಗಿಬಿಟ್ಟಳು. ದಮಯಂತಿ ಅವರ ಎದುರಿಗೆ ಕುಳಿತುಕೊಂಡಳು. ನಾನು ಅವರ ಮುಂದೆ ಕುಳಿತುಕೊಂಡು ಮನಸ್ಸಿನಲ್ಲಿ ವಿಪರೀತ ತಳಮಳ ಏಳುತ್ತಿತ್ತು.

ಬಂದಿದ್ದವರಲ್ಲಿ ಮಧ್ಯ ವಯಸ್ಸಿನ ಒಬ್ಬಾಕೆ, `ಹಲೋ ದಮಯಂತಿ, ನನ್ನ ಹೆಸರು ಸ್ವಪ್ನ. ಮಹಿಳಾ ಜಾಗೃತಿ ಸಂಘದ ಅಧ್ಯಕ್ಷೆ. ನಾನು ನಿಮ್ಮ ಬಗ್ಗೆ ಟಿವಿ ಚಾನೆಲ್ಗಳಲ್ಲಿ ನೋಡಿದ್ದೇನೆ. ಪತ್ರಿಕೆಗಳಲ್ಲಿ ಓದಿದ್ದೇನೆ. ನಿಮಗಾಗಿರುವ ಅನ್ಯಾಯದ ಬಗ್ಗೆ ನಮ್ಮ ಸಂಘದ ಮೂಲಕ ತೀವ್ರ ಸಂತಾಪ ವ್ಯಕ್ತ ಪಡಿಸುತ್ತೇವೆ. ನೀವು ನಮಗೆ ಸಹಕಾರ ನೀಡಿದರೆ ನಿಮಗಾಗಿರುವ ಅನ್ಯಾಯಕ್ಕೆ ನಾವು ನ್ಯಾಯ ದೊರಕಿಸಿಕೊಡಲು ಹೋರಾಡುತ್ತೇವೆ' ಎಂದರು. ದಮಯಂತಿ, **`Thanks for your sympathy moms'** ನನ್ನ ಬಗ್ಗೆ ಈಗಾಗಲೆ ಟಿವಿ ನ್ಯೂಸ್ ಚಾನೆಲ್‌ಗಳು ಸಾಕಷ್ಟು ಅಪಪ್ರಚಾರ ಮಾಡಿಬಿಟ್ಟಿವೆ. ಮತ್ತೆ ನಾನು ಏನಾದರು ಮಾಡಿದರೆ ಉಳಿದಿರೊ ಮಾನ ಮರ್ಯಾದೇನೂ ಹೋಗುತ್ತೆ. ನೀವು ನನಗೆ ಸಹಾಯ ಮಾಡ್ತೀನಿ ಅಂತ ಬಂದಿದ್ದಕ್ಕೆ ತುಂಬಾ ವಂದನೆಗಳು. ಆಗ್ಬಾರ್ದು ಆಗೋಯಿತು. ಇನ್ನ ಏನು ಮಾಡಿದರೆ ಹೋಗಿರುವ ಮಾನ ವಾಪಸ್